# ವಿಎಲ್‌ಸಿ ನಿರ್ಬಂಧ! ಐಇ ನಿವೃತ್ತಿ!

**ವಿಎಲ್‌ಸಿ ಮೀಡಿಯಾ ಪ್ಲೇಯರ್ ಡೌನ್‌ಲೋಡ್‌ಗೆ ಭಾರತದಲ್ಲಿ ನಿರ್ಬಂಧ ಹೇರಲಾಗಿದೆ. ಇದೇ ಸಮಯಕ್ಕೆ, ಸುದೀರ್ಘ 27 ವರ್ಷಗಳ ಪಯಣದ ಬಳಿಕ 'ಇಂಟರ್ನೆಟ್ ಎಕ್ಸ್‌ಪ್ಲೋರರ್' ನಿವೃತ್ತಿಗೊಂಡಿದೆ.**



ಶಶಿಕುಮಾರ್ ಸಿ.

ಹಲವು ವರ್ಷಗಳ ಹಿಂದೆ ಪ್ಯಾರಿಸ್‌ನ 'ವಿಡಿಯೊಲ್ಯಾನ್' ಸಂಸ್ಥೆ ಅಭಿವೃದ್ಧಿಪಡಿಸಿದ್ದ ಅತ್ಯಂತ ಜನಪ್ರಿಯ ಮೀಡಿಯಾ ಪ್ಲೇಯರ್ ಸಾಫ್ಟ್‌ವೇರ್ ಮತ್ತು ಸ್ಟ್ರೀಮಿಂಗ್ ಮೀಡಿಯಾ ಸರ್ವರ್ ಸಹ ಆಗಿದ್ದ 'ವಿಎಲ್‌ಸಿ' ಮೀಡಿಯಾ ಪ್ಲೇಯರ್ ಅನ್ನು ಭದ್ರತಾ ಕಾರಣದಿಂದಾಗಿ ದೇಶದಲ್ಲಿ ನಿರ್ಬಂಧಿಸಲಾಗಿದೆ.

ವಿಎಲ್‌ಸಿ ಮೀಡಿಯಾ ಪ್ಲೇಯರ್ ಅನ್ನು ಇನ್ನು ಮುಂದೆ ಹೊಸದಾಗಿ ಡೌನ್‌ಲೋಡ್ ಮಾಡಿಕೊಂಡು ಬಳಸಲು ಸಾಧ್ಯವಿಲ್ಲ. ಈಗಾಗಲೇ ಡೌನ್‌ಲೋಡ್ ಮಾಡಿಕೊಂಡಿರುವವರು ಬಳಸಬಹುದಾಗಿದ್ದರೂ, ಅವರು ಕೂಡ 'ವಿಎಲ್‌ಸಿ' ಅನ್ನು ಡಿಲೀಟ್ ಮಾಡುವುದು ಸೂಕ್ತ ಎನ್ನಲಾಗಿದೆ. ನಿಷೇಧಕ್ಕೂ ಕೆಲ ತಿಂಗಳುಗಳ ಹಿಂದೆಯಷ್ಟೇ, ವಿಎಲ್‌ಸಿ ಮೀಡಿಯಾ ಪ್ಲೇಯರ್ ಬಗ್ಗೆ ಟೆಕ್ ತಜ್ಞರು ಕೇಂದ್ರ ಸರ್ಕಾರಕ್ಕೆ ವರದಿ ನೀಡಿದ್ದರು. ಆ ವರದಿಯನ್ನು ಆಧರಿಸಿ ನಿರ್ಬಂಧ ವಿಧಿಸಲಾಗಿದೆ.

ತಜ್ಞರು ನೀಡಿದ ವರದಿಯಲ್ಲಿ, 'ಚೀನಾ ಬೆಂಬಲಿತ ಸಿಕಾಡಾ ಹ್ಯಾಕರ್‌ಗಳು, ವಿಎಲ್‌ಸಿ ಮೀಡಿಯಾ ಪ್ಲೇಯರ್ ಬಳಸಿ ಮಾಲ್‌ವೇರ್‌ಗಳನ್ನು ರವಾನಿಸುತ್ತಿದ್ದಾರೆ. ಆ ಮಾಲ್‌ವೇರ್‌ಗಳು ಗ್ರಾಹಕರ ಸಿಸ್ಟಂನಲ್ಲಿರುವ ಎಲ್ಲ ಮಾಹಿತಿಯನ್ನು ಕಲೆಹಾಕಿ ಹ್ಯಾಕರ್‌ಗಳಿಗೆ ಕಳುಹಿಸುತ್ತವೆ. ಚಾಲನೆಯಲ್ಲಿರುವ ಪ್ರಕ್ರಿಯೆಗಳು, ಡೌನ್ಲೋಡ್ ಮಾಡಿದ ಮಾಹಿತಿಗಳನ್ನು ಕದ್ದು, ಹ್ಯಾಕರ್‌ಗಳಿಗೆ ರವಾನಿಸುತ್ತವೆ. ಇದು ದೇಶದ ಆಂತರಿಕ ಭದ್ರತೆಗೆ ಧಕ್ಕೆಯಾಗುತ್ತದೆ' ಎಂಬ ಅಂಶವನ್ನು ಉಲ್ಲೇಖಿಸಲಾಗಿದೆ.

ಸದ್ಯ ದೇಶದಲ್ಲಿ ವಿಎಲ್‌ಸಿ ಮೀಡಿಯಾ ಪ್ಲೇಯರ್ ವೆಬ್‌ಸೈಟ್ ಮತ್ತು ಡೌನ್‌ಲೋಡ್ ಮಾಡಿಕೊಳ್ಳುವ ಲಿಂಕ್ ಅನ್ನು ನಿಷೇಧಿಸಲಾಗಿದೆ. ಆ್ಯಕ್ಟ್ ಫೈಬರ್‌ನೆಟ್ (ACTFibernet), ಜಿಯೊ (Jio), ವೊಡಾಫೋನ್–ಐಡಿಯಾ (Vodafone–idea) ಮತ್ತು ಇತರ ನೆಟ್‌ವರ್ಕ್‌ಗಳನ್ನು ಒಳಗೊಂಡಂತೆ ಎಲ್ಲಾ ಪ್ರಮುಖ 'ಐಎಸ್‌ಪಿ'ಗಳಲ್ಲಿ 'ವಿಎಲ್‌ಸಿ'ಯನ್ನು ಹೊರಗಿಟ್ಟಿವೆ.

ನಿರ್ಬಂಧದ ಬಗ್ಗೆ ಕೇಂದ್ರ ಸರ್ಕಾರವಾಗಲಿ, ವಿಡಿಯೊಲ್ಯಾನ್ ಕಂಪನಿಯಾಗಲಿ ಇದುವರೆಗೆ ಯಾವುದೇ ಸ್ಪಷ್ಟನೆ ನೀಡಿಲ್ಲ. ಗಗನ್‌ದೀಪ್ ಸಪ್ರಾ ಎಂಬ ಹೆಸರಿನ ಟ್ವಿಟರ್ ಬಳಕೆದಾರರೊಬ್ಬರು ವಿಎಲ್‌ಸಿ ವೆಬ್‌ಸೈಟ್‌ನ ಸ್ಕ್ರೀನ್‌ಶಾಟ್ ಅನ್ನು ಹಂಚಿಕೊಂಡಿದ್ದು, ಅದರಲ್ಲಿ 'ಐಟಿ ಆ್ಯಕ್ಟ್, 2000ರ ಅಡಿಯಲ್ಲಿ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯದ ಆದೇಶದ ಪ್ರಕಾರ ವೆಬ್‌ಸೈಟ್ ಅನ್ನು ನಿಷೇಧಿಸಲಾಗಿದೆ' ಎಂದು ತೋರಿಸುತ್ತಿದೆ. ಕಂಪನಿಯ ವೆಬ್‌ಸೈಟ್ (www.videolan.org) ಸಹ ಸ್ಥಗಿತಗೊಂಡಿರುವುದು ಅದಕ್ಕೆ ಪುಷ್ಟಿನೀಡುವಂತಿದೆ.

### ಇಂಟರ್ನೆಟ್ ಎಕ್ಸ್‌ಪ್ಲೋರರ್ ನಿವೃತ್ತಿ!

ಇಂಟರ್ನೆಟ್ ಆರಂಭದ ದಿನಗಳಲ್ಲಿ ಗ್ರಾಹಕರ ಅನುಕೂಲಕ್ಕೆಂದು ಮೈಕ್ರೊಸಾಫ್ಟ್ ಕಂಪನಿಯೇ ತನ್ನ ಗ್ರಾಹಕರಿಗೆ (ಅಂದರೆ ಮೈಕ್ರೊಸಾಫ್ಟ್ ಒಎಸ್ ಬಳಕೆದಾರರಿಗೆ) ಅಭಿವೃದ್ಧಿಪಡಿಸಿದ್ದ ಇಂಟರ್ನೆಟ್ ಎಕ್ಸ್‌ಪ್ಲೋರರ್ ಈಚೆಗೆ (ಜೂನ್ 15ಕ್ಕೆ) ನಿವೃತ್ತಿಯಾಗಿದೆ.



ಮೈಕ್ರೊಸಾಫ್ಟ್‌ನ ಅತ್ಯಂತ ಹಳೆಯ ಬ್ರೌಸರ್ ಇದಾಗಿದ್ದು, ಕಳೆದ 27 ವರ್ಷಗಳ ಹಿಂದೆ ಚಾಲ್ತಿಗೆ ಬಂದ ಈ ಬ್ರೌಸರ್ ಪ್ರಾರಂಭದಲ್ಲಿ ಹೆಚ್ಚು ಜನಪ್ರಿಯತೆಯನ್ನು ಗಿಟ್ಟಿಸಿತಾದರೂ ನಂತರ ಬಂದ ಪ್ರತಿಸ್ಪರ್ಧಿಗಳ ಎದುರು ದಿಟ್ಟವಾಗಿ ನಿಲ್ಲುವಲ್ಲಿ ಯಶ ಕಾಣಲಿಲ್ಲ. ಇದರ ನಡುವೆಯೂ ಸುಮಾರು ವರ್ಷಗಳ ಕಾಲ ಟೆಕ್ ಲೋಕಕ್ಕೆ ಸೇವೆ ನೀಡಿ ಈಗ ನಿವೃತ್ತಿಗೊಂಡಿದೆ. 2021ರ ಮೇ ತಿಂಗಳಿನಲ್ಲೇ ಇಂಟರ್ನೆಟ್ ಎಕ್ಸ್‌ಪ್ಲೋರರ್ ಅನ್ನು ಸ್ಥಗಿತಗೊಳಿಸಲಾಗುತ್ತಿದೆ ಎಂದು ಮೈಕ್ರೊಸಾಫ್ಟ್ ಕಂಪನಿಯು ತನ್ನ ಅಧಿಕೃತ ವೆಬ್‌ಸೈಟ್‌ನಲ್ಲಿ ಘೋಷಿಸಿತ್ತು.

ವಿಂಡೋಸ್ 10ರ ಕೆಲವು ನಿರ್ದಿಷ್ಟ ಆವೃತ್ತಿಗಳಲ್ಲಿ ಮಾತ್ರ ಇಂಟರ್ನೆಟ್ ಎಕ್ಸ್‌ಪ್ಲೋರರ್ ಕಾರ್ಯನಿರ್ವಹಣೆ ಸ್ಥಗಿತಗೊಳ್ಳಲಿದ್ದು, ಇದನ್ನು ಬಳಕೆ ಮಾಡುತ್ತಿರುವ ಗ್ರಾಹಕರು ಮೈಕ್ರೊಸಾಫ್ಟ್ ಎಡ್ಜ್‌ಗೆ ವರ್ಗಾವಣೆಯಾಗುವಂತೆ ವೆಬ್‌ಸೈಟ್ ತೆರೆದೊಡನೆ ಸೂಚನೆ ರವಾನೆಯಾಗುತ್ತಿದೆ. ಇಂಟರ್ನೆಟ್ ಎಕ್ಸ್‌ಪ್ಲೋರರ್ ಬಳಕೆದಾರರನ್ನು ಮೈಕ್ರೊಸಾಫ್ಟ್ ಎಡ್ಜ್‌ಗೆ ರೀಡೈರೆಕ್ಟ್ ಮಾಡಲಾಗುತ್ತದೆ. ಈ ಕುರಿತು ಮಾರ್ಗದರ್ಶನದಿಂದ ಹಿಡಿದು, ವಿಡಿಯೊ ಟ್ಯುಟೋರಿಯಲ್‌ವರೆಗೂ ಎಲ್ಲ ಸೌಲಭ್ಯಗಳನ್ನು ಬಳಕೆದಾರರಿಗೆ ನೀಡಲಾಗುತ್ತದೆ ಎಂದು ಮೈಕ್ರೊಸಾಫ್ಟ್ ಹೇಳಿದೆ.

ಸದ್ಯ ಇಂಟರ್‌ನೆಟ್ ಎಕ್ಸ್‌ಪ್ಲೋರರ್ ಬದಲಿಗೆ ಮೈಕ್ರೊಸಾಫ್ಟ್ ಸಂಸ್ಥೆಯದ್ದೇ ಆದ ಎಡ್ಜ್ ಬ್ರೌಸರ್ ಅನ್ನು ಬಳಸಬಹುದಾಗಿದೆ. ಇದನ್ನು ನೇರವಾಗಿ ಮೈಕ್ರೊಸಾಫ್ಟ್ ವೆಬ್‌ಸೈಟ್‌ನಿಂದ (www.microsoft.com) ಡೌನ್‌ಲೋಡ್ ಮಾಡಿಕೊಂಡು ಗ್ರಾಹಕರು ಬಳಸಬಹುದಾಗಿದೆ.

1995ರಲ್ಲಿ 'ವಿಂಡೋಸ್ 95'ನ ಆಡ್ ಆನ್ ಪ್ಯಾಕೇಜ್‌ನಲ್ಲಿ ಇಂಟರ್ನೆಟ್ ಎಕ್ಸ್‌ಪ್ಲೋರರ್ ಅನ್ನು ಬಿಡುಗಡೆ ಮಾಡಲಾಗಿತ್ತು. ಆ ಪ್ಯಾಕೇಜ್‌ನ ಭಾಗವಾಗಿ ಕಂಪನಿಯು ಇಂಟರ್ನೆಟ್ ಎಕ್ಸ್‌ಪ್ಲೋರರ್ ಅನ್ನು ಉಚಿತವಾಗಿ ತನ್ನ ಗ್ರಾಹಕರಿಗೆ ನೀಡಿತ್ತು. 2003ರಲ್ಲಿ ಈ ಬ್ರೌಸರ್ ಶೇ. 95ರಷ್ಟು ಬಳಕೆಯಲ್ಲಿತ್ತು. ಬಳಿಕ ಹೊಸ ಬ್ರೌಸರ್‌ಗಳ ಎದುರು ತೀವ್ರ ಪೈಪೋಟಿ ನಡೆಸಲು ಸಾಧ್ಯವಾಗದೆ ಬಳಕೆದಾರರ ಸಂಖ್ಯೆಯಲ್ಲಿ ತೀವ್ರ ಕುಸಿತ ಕಂಡಿತ್ತು.